ಹನಿ

# ಪುಸ್ತಕ ಪ್ರೇಮಿ ಒಬಾಮಾ



ಬರಾಕ್ ಒಬಾಮಾ ಪುಸ್ತಕ ಬರೆಯಲು ಆರಂಭಿಸಿದ್ದಾರೆ. 2009ರಿಂದ ಎಂಟು ವರ್ಷಗಳ ಕಾಲ ಅಮೆರಿಕದ ಅಧ್ಯಕ್ಷರಾಗಿ ವಿಶ್ವದ ಸೆಲೆಬ್ರಿಟಿಗಳ ಸಾಲಿನಲ್ಲಿ ಮುಂಚೂಣಿಯಲ್ಲಿದ್ದ ಒಬಾಮಾ ಈಗ ಏನು ಮಾಡುತ್ತಿದ್ದಾರೆ ಎನ್ನುವ ಕುತೂಹಲ ಎಲ್ಲರಲ್ಲೂ ಇರುವುದು ಸಹಜವೇ. ಅವರೀಗ ತಮ್ಮ ಅಧ್ಯಕ್ಷ ಅವಧಿಯ ನೆನಪುಗಳ ಬಗ್ಗೆ ಪುಸ್ತಕವೊಂದನ್ನು ಬರೆಯುತ್ತಿದ್ದಾರೆ. ಅದಕ್ಕೆಂದೇ ದಕ್ಷಿಣ ಶಾಂತಸಾಗರದ ಮಧ್ಯೆ ಇರುವ ದ್ವೀಪವೊಂದರಲ್ಲಿ ರೆಸಾರ್ಟ್ ಮೊರೆ ಹೋಗಿದ್ದಾರೆ. ಮಾರ್ಚ್ ತಿಂಗಳಲ್ಲಿ ಈ ರೆಸಾರ್ಟ್ ಹೊಕ್ಕಿರುವ ಒಬಾಮಾ ಇನ್ನೂ ಒಂದು ತಿಂಗಳು ಅಲ್ಲೇ ಇರಲಿದ್ದಾರೆ ಎನ್ನುವ ಸುದ್ದಿ ಬಂದಿದೆ. ಸಮುದ್ರ ಕ್ರೀಡೆಗಳ ಸಹಿತ ಹಲವು ಸಾಹಸಕ್ರೀಡೆಗಳ ತಾಣವಾಗಿರುವ ಈ ರೆಸಾರ್ಟ್ ಹಾಲಿವುಡ್ ತಾರೆಯರ ಅತ್ಯಂತ ಜನಪ್ರಿಯ ಮನೆಯೂ ಹೌದು. ಒಂದು ಕಾಲದಲ್ಲಿ ಈ ದ್ವೀಪವನ್ನು ಹಾಲಿವುಡ್ ಜನಪ್ರಿಯ ತಾರೆ ಮರ್ಲನ್ ಬ್ರಾಂಡೋ ಖರೀದಿಸಿದ್ದು ಸುದ್ದಿಯಾಗಿತ್ತು.

ಅಮೆರಿಕದ ಅಧ್ಯಕ್ಷರು ನಿವೃತ್ತರಾದ ಮೇಲೆ ತಮ್ಮ ಅಧಿಕಾರ ಅವಧಿಯ ನೆನಪುಗಳ ಬಗ್ಗೆ ಬರೆಯುವುದು ಹೊಸತೇನೂ ಅಲ್ಲ. ಈ ಹಿಂದೆ 2010 ರಲ್ಲಿ ಜಾರ್ಜ್ ಬುಶ್ ಅವರು ಬರೆದ 'ಡಿಸಿಶನ್ ಪಾಯಿಂಟ್ಸ್' ಎನ್ನುವ ಪುಸ್ತಕ ದಾಖಲೆ ಮಾರಾಟ ಕಂಡಿತ್ತು. ಅದೇ ರೀತಿ ಬಿಲ್ ಕ್ಲಿಂಟನ್ ಅವರು ಬರೆದ 'ಮೈ ಲೈಫ್' ಎಂಬ ಪುಸ್ತಕವೂ ಅತ್ಯಧಿಕ ಮಾರಾಟವಾಗಿತ್ತು. ಆದರೆ ಈಗ ಬರಾಕ್ ಒಬಾಮಾ ಅವರ ಬರವಣಿಗೆಯ ಬಗ್ಗೆ ವಿಶ್ವದಾದ್ಯಂತ ಕುತೂಹಲ ಒಂದು ತೂಕ ಹೆಚ್ಚೇ ಇದೆ. ಅದಕ್ಕೆ ಕಾರಣ ಈವರೆಗೆ ಅಮೆರಿಕದಲ್ಲಿ ಅಧಿಕಾರಕ್ಕೆ ಬಂದ 45 ಅಧ್ಯಕ್ಷರಲ್ಲಿ ಬರಾಕ್ ಒಬಾಮಾ ಒಬ್ಬರೇ ಆಫ್ರೊ ಅಮೆರಿಕನ್ ಮೂಲದ ಅಧ್ಯಕ್ಷರು. ಜತೆಗೆ ಬರವಣಿಗೆ ಒಬಾಮಾ ಅವರಿಗೆ ಹೊಸತೂ ಅಲ್ಲ. ಅಧ್ಯಕ್ಷರಾಗುವುದಕ್ಕೆ ಮುಂಚಿನಿಂದಲೇ ಒಬಾಮಾ ಪುಸ್ತಕಗಳನ್ನು ಬರೆಯುತ್ತಿದ್ದರು. ಆಗಲೂ ಅವರ ಪುಸ್ತಕಗಳು 'ಹಾಟ್‌ಸೇಲ್' ಕಂಡಿದ್ದವು.

ಆದರೆ ಈಗ ಲೇಖಕರಾಗಿ ಒಬಾಮಾ ತೂಕ ಇನ್ನಷ್ಟು ಹೆಚ್ಚಿದೆ. ಅಧ್ಯಕ್ಷತೆಯಿಂದ ಕೆಳಗೆ ಇಳಿದ ಬಳಿಕ ನಡೆದ ಹರಾಜಿನಲ್ಲಿ ಬರಾಕ್ ಒಬಾಮಾ ಮತ್ತು ಪತ್ನಿ ಮಿಶೆಲ್ ಒಬಾಮಾ ಅವರು ಬರೆಯಲಿರುವ ಎರಡು ಪುಸ್ತಕಗಳ ಜಾಗತಿಕ ಹಕ್ಕುಗಳನ್ನು ಪ್ರತಿಷ್ಠಿತ ಪೆಂಗ್ವಿನ್ ರ‍್ಯಾಂಡಮ್ ಹೌಸ್ ಖರೀದಿಸಿದೆ. ರೂಪರ್ಟ್ ಮುರ್ಡೋಕ್ ಮಾಲಕತ್ವದ ಹಾರ್ಪರ್ ಕಾಲಿನ್ಸ್ ಪ್ರಕಾಶನದ ಸಹಿತ ಹಲವು ಪ್ರತಿಷ್ಠಿತ ಕಂಪೆನಿಗಳ ಜತೆ ಸ್ಪರ್ಧೆಗೆ ಇಳಿದು ಪೆಂಗ್ವಿನ್ ಈ ಹಕ್ಕುಗಳನ್ನು ಖರೀದಿಸಿದೆ. ಎಂಟು ವರ್ಷಗಳ ಅವಧಿಯ ಅಮೆರಿಕನ್ ಅಧ್ಯಕ್ಷತೆಯ ನೆನಪುಗಳನ್ನು ಒಬಾಮಾ ಮತ್ತು ಮಿಶಲ್ ಇಬ್ಬರೂ ಪ್ರತ್ಯೇಕವಾಗಿ ಬರೆಯಲಿದ್ದಾರೆ. ಈ ಎರಡೂ ಪುಸ್ತಕಗಳ ಹಕ್ಕುಗಳ ಖರೀದಿಗೆ ಪೆಂಗ್ವಿನ್ ಪ್ರಕಾಶನ ನೀಡಿರುವ ಒಟ್ಟು ಮೊತ್ತ 6.5 ಕೋಟಿ ಅಮೆರಿಕನ್ ಡಾಲರ್. ಪುಸ್ತಕದ ಲೇಖಕನಿಗೆ ಸಿಗುವ ರಾಯಧನದ ಮಟ್ಟಿಗೆ ಇದೊಂದು ಹೊಸ ಜಾಗತಿಕ ದಾಖಲೆಯೇ. ಈ ಆದಾಯದಲ್ಲಿ ಒಂದು ಭಾಗವನ್ನು ಚಾರಿಟಿ ಉದ್ದೇಶಕ್ಕೆ ಬಳಸಲಿದ್ದು ಒಬಾಮಾ ಫೌಂಡೇಷನ್‌ಗೆ ವರ್ಗಾಯಿಸುವುದಾಗಿ ಒಬಾಮಾ ಈಗಾಗಲೆ ಪ್ರಕಟಿಸಿದ್ದಾರೆ.

ಸಾಮಾನ್ಯ ವಕೀಲನಾಗಿದ್ದು ರಾಜಕೀಯಕ್ಕೆ ಧುಮುಕಿದ ಒಬಾಮಾ (ಬರ್ತ್‌ಡೇ 4.8.1961) 1997ರಿಂದ 2004ರವರೆಗೆ ಇಲಿನಾಯ್ಸ್ ರಾಜ್ಯದ ಸೆನೆಟರ್ ಆಗಿದ್ದರು. 2005ರಲ್ಲಿ ದೇಶದ ಸೆನೆಟ್‌ಗೆ ಆಯ್ಕೆಯಾದರು. ಆಗಲೂ ಬರವಣಿಗೆ ಮತ್ತು ಭಾಷಣ ಒಬಾಮಾ ಅವರ ಆದಾಯದ ಮೂಲವಾಗಿತ್ತು. 2007ರಲ್ಲಿ ಒಬಾಮಾ ನಿವ್ವಳ ಆಸ್ತಿ ಮೊತ್ತ ಕೇವಲ 13 ಲಕ್ಷ ಡಾಲರ್ ಆಗಿತ್ತು. ಸೆನೆಟರ್ ಆದ ಬಳಿಕ ಭಾಷಣ, ಪುಸ್ತಕಗಳಿಗೆ ಬೇಡಿಕೆ ಹೆಚ್ಚಿತು. 2015ರಲ್ಲಿ ನಿವ್ವಳ ಆಸ್ತಿಯ ಮೊತ್ತ ಸುಮಾರು 1.2 ಕೋಟಿ ಡಾಲರ್‌ಗೆ ಏರಿತು. ಅಧ್ಯಕ್ಷರಾದ ಬಳಿಕ ಒಬಾಮಾ ಆಸ್ತಿ ಮೌಲ್ಯ 400 ಪಟ್ಟು ಏರಿಕೆ ಕಂಡಿದೆ. ಆದರೆ ಟ್ರಂಪ್, ಕ್ಲಿಂಟನ್, ಬುಶ್ ಮುಂತಾದ ಅಧ್ಯಕ್ಷರಿಗೆ ಹೋಲಿಸಿದರೆ ಇದು ಜುಜುಬಿ ಶ್ರೀಮಂತಿಕೆಯೇ.

ಪುಸ್ತಕಗಳ ಜತೆಗಿನ ಒಬಾಮಾ ನಂಟು ಹಿಂದಿನಿಂದಲೂ ಇತ್ತು. ಪುಸ್ತಕ ಓದುವ ಹುಚ್ಚು ಬಾಲ್ಯದ ದಿನಗಳಿಂದಲೂ ಇದೆ ಎಂದು ಅವರೊಮ್ಮೆ ಸಂದರ್ಶನದಲ್ಲಿ ನೆನಪುಗಳನ್ನು ಬಿಚ್ಚಿಟ್ಟಿದ್ದರು. ಅಮೆರಿಕದ ಅಧ್ಯಕ್ಷರಾಗಿದ್ದಾಗಲೂ ಈ ಓದುವ ಹುಚ್ಚು ಬಿಟ್ಟಿರಲಿಲ್ಲ. ಶ್ವೇತಭವನದಲ್ಲಿ ಇದ್ದಾಗಲೂ ಪ್ರತಿದಿನ ರಾತ್ರಿ ಒಂದು ಗಂಟೆಯ ಅವಧಿ ಪುಸ್ತಕಗಳನ್ನು ಓದುವುದಕ್ಕೆಂದೇ ಮೀಸಲಾಗಿತ್ತು. ಅಬ್ರಹಾಂ ಲಿಂಕನ್, ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್, ಮಹಾತ್ಮಾ ಗಾಂಧಿ ಮತ್ತು ನೆಲ್ಸನ್ ಮಂಡೇಲ ತಮ್ಮ ಮೇಲೆ ಅಪಾರ ಪ್ರಭಾವ ಬೀರಿದ ಲೇಖಕರು ಎಂದೂ ಒಬಾಮಾ ಸ್ವತಃ ಒಪ್ಪಿಕೊಂಡದ್ದುಂಟು. 'ರಾಜಕೀಯದ ಅತೀವ ಒತ್ತಡದ ನಡುವೆ ನನ್ನ ಮಾನಸಿಕ ಸಮತೋಲನವನ್ನು ಕಾಪಾಡಿಕೊಳ್ಳಲು ಪುಸ್ತಕಗಳು ನನಗೆ ನೆರವಾಗಿವೆ' ಎಂದಿದ್ದರು. ಪುಸ್ತಕಗಳ ಬರವಣಿಗೆಯೂ ಹಾಗೆಯೇ. 1995ರಲ್ಲಿ ಬರೆದ 'ಡ್ರೀಮ್ಸ್ ಫ್ರಮ್ ಮೈ ಫಾದರ್' ಹಾಗೂ 2006ರಲ್ಲಿ ಬರೆದ 'ದಿ ಅಡಾಸಿಟಿ ಆಫ್ ಹೋಪ್' ಎಂಬ ಎರಡೂ ಪುಸ್ತಕಗಳು ಒಬಾಮಾಗೆ ಅಪಾರ ಕೀರ್ತಿ ಮತ್ತು ಹಣವನ್ನು ತಂದುಕೊಟ್ಟಿವೆ. ಇತ್ತೀಚೆಗೆ ತಮ್ಮ ಮಗಳಿಗೆ ಜಗತ್ತಿನ ಅತ್ಯುತ್ತಮ ಕಾದಂಬರಿ ಮತ್ತು ಪುಸ್ತಕಗಳನ್ನು ಒಳಗೊಂಡ ಕಿಂಡಲ್ ಅನ್ನು ಒಬಾಮಾ ಉಡುಗೊರೆ ನೀಡಿದ್ದೂ ದೊಡ್ಡ ಸುದ್ದಿಯಾಗಿತ್ತು.

ರಾಷ್ಟ್ರದ ಅಧ್ಯಕ್ಷತೆಯಿಂದ ನಿವೃತ್ತರಾದ ಬಳಿಕ ಕೆಲವು ವಾರ ಒಬಾಮಾ, ಹೆಂಡತಿ ಮಕ್ಕಳ ಜತೆಗೆ ವಿಹಾರಕ್ಕೆ ಹೊರಟಿದ್ದರು. ಕೋಟ್ಯಧಿಪತಿ ರಿಚರ್ಡ್ ಬ್ರಾನ್ಸನ್‌ಗೆ ಸೇರಿದ ಮೊಸ್ಕಿಟೊ ದ್ವೀಪದಲ್ಲಿ ಒಬಾಮಾ ಸಂಸಾರದ ರಜಾದಿನದ ಚಿತ್ರಗಳು ಮಾಧ್ಯಮಗಳಲ್ಲಿ ಭರ್ಜರಿ ಪ್ರಚಾರ ಪಡೆದವು. ರಜಾಕಾಲದಲ್ಲೂ ಒಬಾಮಾ ಅಮೆರಿಕದ ರಾಜಕೀಯದಲ್ಲಿ ಸಾಕಷ್ಟು ತೊಡಗಿಸಿಕೊಂಡಿದ್ದು ಸುಳ್ಳಲ್ಲ. ಆದರೆ ಈಗ ಪುಸ್ತಕ ಬರೆಯುವ ನೆಪದಲ್ಲಿ ರಾಜಕೀಯ ಚಟುವಟಿಕೆ ಸಾಕಷ್ಟು ಕಡಿಮೆಯಾಗಿದೆ. ಟ್ರಂಪ್ ಆಡಳಿತದ ಕೆಲವು ಮಹತ್ವದ ನಿರ್ಧಾರಗಳನ್ನು ಖಂಡಿಸುವ ಕೆಲಸವನ್ನೂ ಒಬಾಮಾ ಬದಲಿಗೆ ಅವರ ಬೆಂಬಲಿಗರೇ ನಿರ್ವಹಿಸುತ್ತಿದ್ದಾರೆ. ಸದ್ಯಕ್ಕಂತೂ ಪುಸ್ತಕ ಪ್ರಿಯರು ಒಬಾಮಾ ಹೊಸ ಪುಸ್ತಕವನ್ನು ಕುತೂಹಲದಿಂದ ಕಾಯುತ್ತಿದ್ದಾರೆ.

Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65